ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 30-38
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ದೊಡ್ಡಬಳ್ಳಾಪುರ ತಾಲೂಕಿನ ರಾಜಕೀಯ ಇತಿಹಾಸ : ಗಂಗರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ

**ಡಾ.ಸುಷ್ಮಾ.ಹೆಚ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಮಹಿಳಾ ಕಾಲೇಜು, ದೊಡ್ಡಬಳ್ಳಾಪುರ

**Abstract:**
*ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಒಂದಾದ ದೊಡ್ಡಬಳ್ಳಾಪುರ ತಾಲೂಕು ಬೆಂಗಳೂರು ನಗರ ಜಿಲ್ಲೆಯ ಉತ್ತರಕ್ಕೆ ರಾಜ್ಯ ಹೆದ್ದಾರಿ–9ರಲ್ಲಿ 40 ಕಿ.ಮೀ. ದೂರದಲ್ಲಿದೆ. 802 ಚ.ಕಿ.ಮೀ. ವ್ಯಾಪಿಸಿರುವ ಈ ತಾಲೂಕು ಅಕ್ಷಾಂಶ 13ಲಿ09’39.9” ಮತ್ತು 13ಲಿ30’00.1” ಯಿಂದ ರೇಖಾಂಶ 77ಲಿ19’12.7” ಮತ್ತು 77ಲಿ40’11.3” ವರೆಗೂ ಹಬ್ಬಿದೆ. ಈ ತಾಲೂಕು ಉತ್ತರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕು, ದಕ್ಷಿಣದಲ್ಲಿ ಬೆಂಗಳೂರು ಉತ್ತರ ತಾಲೂಕು, ಪೂರ್ವಕ್ಕೆ ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರ ತಾಲೂಕು, ಪಶ್ಚಿಮಕ್ಕೆ ನೆಲಮಂಗಲ ಮತ್ತು ಕೊರಟಗೆರೆ ತಾಲೂಕುಗಳಿಂದ ಸುತ್ತುವರೆಯಲ್ಪಟ್ಟಿದೆ. ಈ ತಾಲೂಕನ್ನು 5 ಹೋಬಳಿಗಳಾಗಿ ವಿಂಗಡಿಸಿದ್ದು, ಒಂದು ಪುರಸಭೆ, 280 ಜನವಸತಿಯ ಗ್ರಾಮಗಳು ಮತ್ತು 18 ನಿರ್ಜನ ಗ್ರಾಮಗಳನ್ನು ಹೊಂದಿದೆ. ಪ್ರಸ್ತುತ ಲೇಖನದಲ್ಲಿ ಗಂಗರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗಿನ ದೊಡ್ಡಬಳ್ಳಾಪುರ ತಾಲೂಕಿನ ರಾಜಕೀಯ ಇತಿಹಾಸವನ್ನು ಅಧ್ಯಯನ ಮಾಡಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ರಾಜಕೀಯ ಇತಿಹಾಸ, ದೊಡ್ಡಬಳ್ಳಾಪುರ, ನಿಲುವುಗಲ್ಲು, ಶಿಲಾವೃತ್ತ ಸಮಾಧಿ, ಮೇಲ್ಗುಪ್ಪೆ ಸಮಾಧಿ, ಕಲ್ಗುಪ್ಪೆ ಸಮಾಧಿ.*

## ಪೀಠಿಕೆ

ದಕ್ಷಿಣ ಭಾರತದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲ ಕ್ರಿ.ಪೂ.1000 ದಿಂದ 1500 ರವರೆಗೂ ಎಂದು ಸಂಶೋಧಕರು ನಿರ್ಣಯಿಸಿದ್ದು, ದಕ್ಷಿಣ ಭಾರತದ ಹಲವಾರು ಕಡೆ ಬೃಹತ್ ಶಿಲಾಸಂಸ್ಕೃತಿಯ ನೆಲೆಗಳು ಪತ್ತೆಯಾಗಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಇಂತಹ ಹಲವಾರು ನೆಲೆಗಳು ಕಾಣಸಿಗುತ್ತಿದ್ದು ಬಹಳಷ್ಟು ಶಿಲಾಗೋರಿಗಳು ಪತ್ತೆಯಾಗಿವೆ. ದೊಡ್ಡಬಳ್ಳಾಪುರ ತಾಲೂಕಿನ ಬೆಣಕಿನ ಮಡಗು ಗ್ರಾಮದ ಪಕ್ಕದಲ್ಲಿರುವ ಸೊಲುಕುಂಟೆ ಗ್ರಾಮದ ಪಕ್ಕದಲ್ಲಿ ಕಾಡಿನ ಮಧ್ಯೆ 13 ಅಡಿ ಉದ್ದ 3 ಅಡಿ ಅಗಲದ ನಿಲುವುಗಲ್ಲು ದೊರೆತಿದ್ದು ಇದರ ಸುತ್ತಮುತ್ತ 150ಕ್ಕೂ ಹೆಚ್ಚು ಕಲ್ಗುಪ್ಪೆ ಸಮಾಧಿಗಳಿವೆ.[1] ಇಲ್ಲಿಂದ ಸ್ವಲ್ಪ ಮುಂದೆ ಬೆಟ್ಟದ ತಪ್ಪಲಿನಲ್ಲಿ ಹಾಲು ಚಿಲುಮೆಯ ಬಳಿ 12 ಅಡಿ ಉದ್ದ 3½ ಅಡಿ ಅಗಲದ ನಿಲುವುಗಲ್ಲೊಂದು ಇದ್ದು ಇದರ ಸುತ್ತಲೂ

[1]ಸಾಸಲು ವಿಶ್ವನಾಥ. (1999) ನಿಲುವುಗಲ್ಲು. ಇತಿಹಾಸ ದರ್ಶನ, ಸಂ–14, ದೊಡ್ಡಬಳ್ಳಾಪುರ ಹಾಗೂ ದೇವನಹಳ್ಳಿಯ ನವಶೋಧಿತ ಶಿಲಾಯುಗ ಸಂಸ್ಕೃತಿಯ ಸ್ಮಾರಕಗಳು ಮತ್ತು ರೇಖಾಚಿತ್ರಗಳು. ಪು.11

**Please cite this article as:** ಸುಷ್ಮಾ.ಹೆಚ್. (2025). ದೊಡ್ಡಬಳ್ಳಾಪುರ ತಾಲೂಕಿನ ರಾಜಕೀಯ ಇತಿಹಾಸ: ಗಂಗರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(6), 30–38

17 ಮೇಲ್ಗುಪ್ಪೆ ಸಮಾಧಿಗಳಿವೆ.[2] ರಾಜಘಟ್ಟ ಗ್ರಾಮದ ಹೊಲಗಳಲ್ಲಿ 32 ಶಿಲಾವೃತ್ತ ಸಮಾಧಿಗಳಿವೆ. ಇದರ ಪಕ್ಕ ಜಾಲಗೆರೆ ಸಮೀಪ 12 ಅಡಿ ಉದ್ದ 3½ ಅಡಿ ಅಗಲದ ಒಂದು ನಿಲುವುಗಲ್ಲು ಇದ್ದು ಈ ಪರಿಸರದಲ್ಲಿ 11 ಕಲ್ಗುಪ್ಪೆ ಸಮಾಧಿಗಳಿವೆ. ದೊಡ್ಡ ಬೆಲವಂಗಲ–ಸಕ್ಕರೆಗೊಲ್ಲಹಳ್ಳಿ ಮಧ್ಯೆ ಅಕ್ಕತಮ್ಮನಹಳ್ಳಿ ಸಮೀಪದ ಮಟಗುಂಟೆಯ ಬಳಿ ಒಂದು ತುಂಡು ಕಲ್ಲಿನ ಸಮಾಧಿ ಮತ್ತು ಚಿಕ್ಕ ನಿಲಸುಗಲ್ಲು ಇದೆ. ಭಕ್ತರಹಳ್ಳಿ ಅಲಪನಹಳ್ಳಿ ಮಧ್ಯೆ 14 ಅಡಿ ಎತ್ತರ 4 ಅಡಿ ಅಗಲದ ನಿಲುವುಗಲ್ಲು ಇದ್ದು ಈ ಪ್ರದೇಶದಲ್ಲಿ 17 ಬೃಹತ್ ಶಿಲಾಸಮಾಧಿಗಳಿವೆ.[3] ಉಜ್ಜನಿ ಬೆಟ್ಟದ ತಪ್ಪಲಿನಲ್ಲಿ 12 ಅಡಿ ಉದ್ದ 4 ಅಡಿ ಅಗಲದ ಒಂದು ನಿಲುವುಗಲ್ಲು ಇದ್ದು ಇದಕ್ಕಿಂತ ಸ್ವಲ್ಪ ಮುಂದೆ ಹೋದರೆ 3 ಅಡಿ ಉದ್ದದಿಂದ 22 ಅಡಿ ಉದ್ದದವರೆಗಿನ 2 ಅಡಿ ಅಗಲದಿಂದ 6 ಅಡಿ ಅಗಲದ ವರೆಗಿನ 21 ನಿಲುವುಗಲ್ಲುಗಳಿವೆ.[4] ಜಾಲಗೆರೆ ಗ್ರಾಮದ ಮಂಜಗಪ್ಪನ ಹೊಲದಲ್ಲಿ ಆರು ನಿಲುವುಗಳಿದ್ದು, ಇಂತಹ ಹಲವಾರು ಶಿಲಾಸಮಾಧಿಗಳನ್ನು ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಕಾಣಬಹುದು.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆ, ಬೆಂಗಳೂರು ಜಿಲ್ಲೆ, ಕೊಡಗು ಜಿಲ್ಲೆಗಳಲ್ಲೇ ಅತಿ ಪುರಾತನವಾದ ಶಾಸನ ಕ್ರಿ.ಶ.456ರ ಮಲ್ಲೋಹಳ್ಳಿ ಗ್ರಾಮದ ಕೊಂಗಣಿಮಹಾರಾಜನ ತಾಮ್ರ ಶಾಸನ.[5] ಅವನೀತ ಎಂಬ ಹೆಸರಿನಿಂದಲೇ ಪ್ರಖ್ಯಾತನಾಗಿದ್ದ ಕೊಂಗಣಿವರ್ಮನು ತನ್ನ ಆಳ್ವಿಕೆಯ 29ನೇ ವರ್ಷದಲ್ಲಿ ಆನೆ ಮುದ್ರೆ ಇರುವ ಮೂರು ಪತ್ರಗಳ ಈ ಶಾಸನ ಹಾಕಿಸಿದ್ದಾನೆ. ಹೀಗಾಗಿ ಈತ ಕ್ರಿ.ಶ.427ರಲ್ಲಿಯೇ ತನ್ನ ಆಳ್ವಿಕೆ ಆರಂಭಿಸಿದ್ದಾನೆ. ಇದೇ ಗ್ರಾಮದ ಕ್ರಿ.ಶ.517ರ ಮತ್ತೊಂದು ತಾಮ್ರ ಶಾಸನವು ಸಹ ಇವನ ಕಾಲದ್ದೇ ಆಗಿದೆ.[6] ಮೇಲೂರು ಕೆರೆ ಏರಿಯ ಕೆಳಭಾಗದ ಭೂಮಿಯನ್ನು ತೈತರೀಯ ಬ್ರಾಹ್ಮಣ ಗೋತ್ರಕ್ಕೆ ಸೇರಿದ ಕಾಡಸ್ವಾಮಿಗೆ ದಾನ ನೀಡಲಾಗಿದೆ ಎಂದು ಶಾಸನದ ಪಾಠ ತಿಳಿಸುತ್ತದೆ. ಶಾಸನದಲ್ಲಿನ ಕಾಡಸ್ವಾಮಿಯು ಮುರುಗರೆ ರಾಷ್ಟ್ರದ ತಿಪ್ಪೂರಿನ ನಿವಾಸಿ. ತಿಪ್ಪೂರು ಇಂದಿನ ದೊಡ್ಡಬಳ್ಳಾಪುರದಲ್ಲಿದ್ದು, ಮೇಲೂರು ಕೆರೆಯು ಶಿಡ್ಲಘಟ್ಟದಲ್ಲಿದೆ ಎಂದು ಗುರುತಿಸಲಾಗಿದೆ.

ಗಂಗರ ರಾಜಧಾನಿ ಕುವಲಾಲಪುರವನ್ನು ಕೋಲಾರವೆಂದು ತಜ್ಞರು ಗುರುತಿಸಿದ್ದಾರೆ. ದೊಡ್ಡಬಳ್ಳಾಪುರ ತಾಲೂಕಿನ ಬೈರಾಪುರ ಸೆರಗಿನಲ್ಲಿರುವ ಕೋಳಾಲ ಅಂದಿನ ಕುವಲಾಲಪುರವಾಗಿರಬೇಕೆಂದು ಡಾ.ಎಂ.ಚಿದಾನಂದಮೂರ್ತಿಗಳು ಹಾಗೂ ಡಾ. ಹೆಚ್.ಎಸ್.ಗೋಪಾಲ್‌ರಾವ್‌ರವರು ಊಹಿಸುತ್ತಾರೆ. ಇದರ ಊಹೆಗೆ ಸಾಕ್ಷಿ ಎಂಬಂತೆ ಇಲ್ಲಿ ಗಂಗರ ಹಲವಾರು ಶಾಸನಗಳು ವೀರಗಲ್ಲುಗಳು ದೊರೆತಿವೆ. ಗಂಗರ ವೇಳೆವಾಳಿ ಶಾಸನೋಕ್ತ ವೀರಗಲ್ಲು ಇಲ್ಲಿಯೂ ದೊರೆತಿದೆ.

ಕೊಂಗಣಿವರ್ಮನ ಕ್ರಿ.ಶ.475 ಮತ್ತು ಕ್ರಿ.ಶ.517ರ ಶಾಸನಗಳನ್ನು ಹೊರತುಪಡಿಸಿ ಗಂಗರ ಬೇರೆ ಶಾಸನಗಳು ದೊಡ್ಡಬಳ್ಳಾಪುರದಲ್ಲಿ ಲಭ್ಯವಿಲ್ಲ. ದೊಡ್ಡಬಳ್ಳಾಪುರ ಮತ್ತು ಹೊಸಕೋಟೆಗಳನ್ನು ತಮ್ಮ ಆಡಳಿತ ಕೇಂದ್ರಗಳನ್ನಾಗಿಸಿಕೊಂಡಿದ್ದ ಗಂಗರು ಕ್ರಿ.ಶ.750ರ ಸುಮಾರಿಗೆ ಮಣ್ಣೆಗೆ ತಮ್ಮ ರಾಜಧಾನಿಯನ್ನು ಬದಲಾಯಿಸಿದರು. ನಂತರ ಹೊಸಕೋಟೆ ಪ್ರದೇಶದ ಮೇಲಿನ ಗಂಗರ ಹಿಡಿತ ಸಡಿಲವಾಗಿ, ದೊಡ್ಡಬಳ್ಳಾಪುರ, ಹೊಸಕೋಟೆ,

[2] ಮೇಲಿನದೇ, ಪು.11

[3] ಮೇಲಿನದೇ, ಪು.11

[4] ಸಾಸಲು ವಿಶ್ವನಾಥ.(2003)ಇತಿಹಾಸ ದರ್ಶನ. ಸಂಪುಟ–18–ಬೃಹತ್ ಶಿಲಾಸಂಸ್ಕೃತಿಯ ಕೆಲವು ಹೊಸ ನೆಲೆಗಳು, ಪುಟ.7

[5] ರೈಸ್ ಬಿ.ಎಲ್. (1905). ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–9, Db-67, AD-456, ಮೈಸೂರು ಕೇಂದ್ರೀಯ ಮುದ್ರಣಾಲಯ, ಬೆಂಗಳೂರು

[6] ಮೇಲಿನದೇ, Db–68, AD-517

ದೇವನಹಳ್ಳಿ ತಾಲೂಕುಗಳ ಗಡಿಗಳಲ್ಲಿ ನೊಳಂಬರ ಉಪಸ್ಥಿತಿಯನ್ನು ಗುರುತಿಸಬಹುದು.

ನೊಳಂಬ ದೊರೆ ಮಹೇಂದ್ರನ ಕಾಲಕ್ಕೆ ಸೇರಿದ ಕ್ರಿ.ಶ.880ರ ವೀರಗಲ್ಲು ದೊಡ್ಡಬೆಲವಂಗಲದ ಚನ್ನರಾಯಸ್ವಾಮಿ ದೇವಾಲಯದ ಬಳಿ ಇದೆ. ಮಹೇಂದ್ರನು ಅರಸುಗೇಯನಾಗಿದ್ದಾಗ ವೀರಯೋಧನೊಬ್ಬ, ಗಂಗ ದೊರೆಯ ಜೊತೆ ಯುದ್ಧವಾಗಿ ಈ ಯುದ್ಧದಲ್ಲಿ ಅರದರೆ–ಒಡೆಯ ಚಿಕ್ಕ–ಕಕಮೋಸನನ್ನು ಕೊಂದು ತಾನು ಇಂದ್ರಲೋಕವನ್ನು ಸೇರಿದ್ದಾನೆ.[7] ಈ ವೀರಗಲ್ಲಿನಲ್ಲಿ ಗಂಗ ದೊರೆಯ ಹೆಸರು ಮತ್ತು ಮಡಿದ ವೀರನ ಹೆಸರು ಉಲ್ಲೇಖವಾಗಿಲ್ಲ. ಬಹುಶಃ ಗಂಗ ದೊರೆ ಎರಡನೇ ರಾಚಮಲ್ಲ (ಕ್ರಿ.ಶ.870–907)ನ ಜೊತೆ ಈ ಯುದ್ಧವಾಗಿರಬಹುದು. ಇದೇ ಮಹೇಂದ್ರನಿಗೆ ಸೇರಿದ ಜೋಡಿದಳಸಗೆರೆ ಗ್ರಾಮದ ವೀರಗಲ್ಲು ಮಹೇಂದ್ರನು ಗಂಗ–6000 ಅನ್ನು ಕ್ರಿ.ಶ.870ರಲ್ಲಿ ಆಳುತ್ತಿದ್ದನೆಂದು ತಿಳಿಸುತ್ತದೆ.[8]

ನೊಳಂಬ ಮಹೇಂದ್ರನ ನಂತರ ಅವನ ಮಗ ಅಯ್ಯಪ್ಪದೇವನು ಆಳ್ವಿಕೆಗೆ ಬಂದನು. ಕ್ರಿ.ಶ.918ರ ಜಕ್ಕಸಂದ್ರದ ಶಾಸನ ಅಯ್ಯಪ್ಪದೇವನ ಮಗನಿಗೆ ಸಂಬಂಧಿಸಿದ್ದಾಗಿದೆ.[9] ಇವನ ಆಳ್ವಿಕೆಯಲ್ಲಿ ಸಾಂಡಿಮಲ್ಲನು ಜಕ್ಕಸಂದ್ರಕ್ಕೆ ಬಂದು ಹಸುಗಳನ್ನು ಹೊಯ್ಯುತ್ತಿರುವಾಗ ಕೊರವ ಬಸವಶೆಟ್ಟಿಯ ಮಗ ಚಬ್ಬಿಶೆಟ್ಟಿಯು ಹಸುಗಳನ್ನು ಜೋಪಾನ ಮಾಡಿ ತಾನು ಮಡಿದು ಸ್ವರ್ಗ ಸೇರಿದನು.[10] ಕ್ರಿ.ಶ.920ರ ಅದೇ ಸ್ಥಳದ ಮತ್ತೊಂದು ವೀರಗಲ್ಲು ತಿಳಿಸುವಂತೆ ಅಜ್ಜನರಾಹಾನ ಆಳ್ವಿಕೆಯಲ್ಲಿ ಹಸುಗಳನ್ನು ಹೊತ್ತೊಯ್ದಾಗ ಚಬ್ಬಿಶೆಟ್ಟಿಯ ಕಿರಿಯ ಸೋದರ ಮಣಿಯಮ ಶೆಟ್ಟಿಯು ಹಸುಗಳನ್ನು ಸಂರಕ್ಷಿಸಿ ತಾನು ಸ್ವರ್ಗಸ್ಥನಾದನು.[11] ಕ್ರಿ.ಶ.918ರ ವೀರಗಲ್ಲಿನಲ್ಲಿ ಸ್ವರ್ಗಸ್ಥನಾದ ಚಬ್ಬಿಶೆಟ್ಟಿಯ ಕಿರಿಯ ಸೋದರನೇ ಕ್ರಿ.ಶ.920ರ ವೀರಗಲ್ಲಿನ ವೀರ ಮಣಿಯವಸೆಟ್ಟಿ. ಇವರ ವಂಶದ ಹೆಸರು ಕೊರವ ಎಂದು ಶಾಸನಗಳಿಂದ ತಿಳಿದುಬಂದಿದೆ.

ಗಂಗರು ನೊಳಂಬರ ನಂತರ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ದೊರೆಯುವುದು ಹೊಯ್ಸಳರ ಶಾಸನಗಳು. ಹೊಯ್ಸಳರಿಗಿಂತ ಮೊದಲು ಆಳ್ವಿಕೆ ನಡೆಸಿದ ಚೋಳರ ಶಾಸನಗಳು ಈ ತಾಲೂಕಿನಲ್ಲಿ ದೊರೆತಿಲ್ಲ. ಚೋಳರು ಕೋಲಾರ, ಮುಳಬಾಗಿಲು, ಹೊಸಕೋಟೆಗೆ ಬಂದು ಇಲ್ಲಿಂದ ನೆಲಮಂಗಲ, ದೇವನಹಳ್ಳಿಗಳಿಗೆ ಪ್ರವೇಶ ಪಡೆದರು. ಹೀಗಾಗಿ ದೊಡ್ಡಬಳ್ಳಾಪುರ ಪ್ರದೇಶದಲ್ಲಿ ಚೋಳ ಪ್ರಭಾವ ಕಡಿಮೆ.

ಕ್ರಿ.ಶ.1115ರ ವಿಷ್ಣುವರ್ಧನನ ಶಾಸನ ಹುಲುಕುಡಿ ಬೆಟ್ಟದ ಬುಡದಲ್ಲಿನ ಮುಕ್ಕಣೇಶ್ವರ ದೇವಾಲಯ ಎದುರಿನ ಹುಟ್ಟು ಬಂಡೆಯ ಮೇಲಿದೆ. ಹುಲುಕುಡಿಯನ್ನು ಪುರುಕುಡಿ ಎಂದು ಕರೆಯಲಾಗಿದ್ದು ವೀರಗಂಗ–ಪೊಯ್ಸಳ ದೇವನು ಮಹಾಮಂಡಲೇಶ್ವರನಾಗಿದ್ದಾಗ, ಮಣ್ಣೆನಾಡಿನ ಆಳ್ವನ ಆದ ಸತ್ತಯ್ಯನ್‌ನು ಶಿವಬ್ರಾಹ್ಮಣ ಪಾನ್ಮಭಟ್ಟನ ಮಗ ಪನ್ನಾ–ಭಟ್ಟನಿಗೆ ಪುರುಕುಡಿ ಬೆಟ್ಟದ ಪೂರ್ವತುದಿಯಲ್ಲಿರುವ ಮುದೀಶ್ವರಂ–ಉದೈಯ್–ಮಹದೇವರಿಗಾಗಿ ದಾನ ನೀಡಿದ್ದಾನೆ.[12] ಹುಲುಕುಡಿ ಬೆಟ್ಟದ ಪೂರ್ವತುದಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯವೇ ಈ ಶಾಸನದಲ್ಲಿನ ಮುದೀಶ್ವರಂ–ಉದೈಯ್–ಮಹದೇವರ್. ವೀರಶೈವ ಪಂಥವು ಇತರ ಶೈವಪಂಥಗಳನ್ನು ತನ್ನೊಳಗೆ ಸೇರಿಸಿಕೊಂಡು ತಾನು ಪ್ರವರ್ಧಮಾನಕ್ಕೆ ಬಂದಿತು ಎಂಬ ಮಾತಿದೆ. ಇದಕ್ಕೆ ಮುದೀಶ್ವರಂ–ಮಹದೇವನು ಸಾಕ್ಷಿಯಾಗಿದ್ದಾನೆ. ಇಂದು ಹುಲುಕುಡಿಯು

[7] ಅಡಿಟಿಪ್ಪಣಿ–7, Db–3, AD-880
[8] ಮೇಲಿನದೇ, Ht–09, AD-870
[9] ಅಡಿಟಿಪ್ಪಣಿ–10, Db–09, AD-918
[10] ಮೇಲಿನದೇ, Db–09, AD-918
[11] ಮೇಲಿನದೇ, Db–10, AD-920
[12] ಅಡಿಟಿಪ್ಪಣಿ–19, Db–11, AD-1115

ವೀರಭದ್ರಸ್ವಾಮಿ ದೇವಾಲಯಕ್ಕೆ ಹೆಸರುವಾಸಿಯಾಗಿದ್ದು. ನೈಸರ್ಗಿಕ ಗುಹೆಯಲ್ಲಿನ ಮಲ್ಲಿಕಾರ್ಜುನ ಲಿಂಗವು ತನ್ನ ಪ್ರಾಮುಖ್ಯತೆ ಕಳೆದುಕೊಂಡಿದೆ.

ದೊಡ್ಡಬಳ್ಳಾಪುರ ಕೋಟೆಯ ಕ್ರಿ.ಶ.1207ರ ಶಾಸನದ ಮೇಲ್ಭಾಗದಲ್ಲಿ ಕ್ರಿ.ಶ.1691ರ ಔರಂಗಜೇಬನ ಶಾಸನವಿದೆ.[13] ಹಳೆಯ ಶಾಸನಕ್ಕೆ ಯಾವುದೇ ಚ್ಯುತಿಬಾರದಂತೆ ಈ ಶಾಸನ ಹಾಕಿಸಲಾಗಿದೆ. ಕ್ರಿ.ಶ.1207ರ ಶಾಸನದ ಪಾಠ ತಿಳಿಸುವಂತೆ ಹೊಯ್ಸಳ ದೊರೆ ವೀರನರಸಿಂಹದೇವನು ದ್ವಾರ ಸಮುದ್ರದಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಮಹಾಮಂಡಲೇಶ್ವರ ತ್ರಿಭುವನಮಲ್ಲ ನಂದಿಗಿರಿಯ ದೊರೆ ಬೆಟ್ಟದೇವರಸನು ಯಲಹಂಕದಲ್ಲಿ ನೆಲೆಸಿದ್ದು ಸುಭೀಕ್ಷೆಯಿಂದ ರಾಜ್ಯವಾಳುತ್ತಿದ್ದನು. ಈ ಸಮಯದಲ್ಲಿ ಬಲ್ಲಾಳಸೆಟ್ಟಿ ಮತ್ತು ಇತರ ಸೆಟ್ಟಿಗಳು, ನಾನಾ ದೇಸವಾಲಾಗಳು, ನಾಕಾಬಾರಗಳು ಸೇರಿ ಗವರೇಶ್ವರ ದೇವರ ಸೇವೆ, ಅಲಂಕಾರ, ನೈವೇದ್ಯ, 16 ರೀತಿಯ ಅರ್ಪಣೆ, ದೇವಾಲಯ ರಿಪೇರಿಗಳಿಗೆಂದು ದಾನ ನೀಡಿದ್ದಾರೆ.[14] ಈ ಶಾಸನದಲ್ಲಿ ವಿವಿಧ ವಸ್ತುಗಳ ಮೇಲೆ ಹೇರಲಾದ ತೆರಿಗೆಗಳ ವಿವರಣೆ ಇದೆ.

3ನೇ ವೀರಬಲ್ಲಾಳದೇವನ ಕ್ರಿ.ಶ.1306ರ ಶಾಸನದಲ್ಲಿ ದ್ವಾರಸಮುದ್ರದ ಹಿರಿಯ ಕಾಲಾಮತದ ಜಪಿಗುಮತ, ಕಂಬಾರರು, ಕುಂಬಾರರು, ಅಕ್ಕಸಾಲಿಗರು, ನಾಲ್ಕು ನಾಡುಗಳ ವೀರ ಪಾಂಚಾಲರುಗಳು ಸೇರಿ ನೀಡಿದ ದಾನದ ವಿವರಣೆ ಇದೆ.[15] ಇಸ್ತೂರಿನ ಕಬ್ಬಾಳಮ್ಮ ದೇವಾಲಯದ ಮುಂಭಾಗದಲ್ಲಿ ಈ ಶಾಸನವಿದೆ. ಕಂಬಾಳಮ್ಮ ದೇವಾಲಯದ ಮುಂಭಾಗದಲ್ಲಿ ಗಂಗರ ಕಾಲದ ನೀಲಕಂಠೇಶ್ವರ ದೇವಾಲಯದ ಅವಶೇಷಗಳು ಇವೆ. ಈ ಶಾಸನ ಈ ದೇವಾಲಯಕ್ಕೆ ಸಂಬಂದಿಸಿದ್ದಾಗಿದೆ. ಕ್ರಿ.ಶ.2007ರಲ್ಲಿ ಸಿಡಿಲಿನ ಹೊಡೆತಕ್ಕೆ ಸಿಕ್ಕಿ ದೇವಾಲಯ ನಾಶವಾಗಿದ್ದು ಶಾಸನ ಮಾತ್ರ ನಿಂತಿದೆ. ಇದೇ ವರ್ಷ ದೊಡ್ಡ ತುಮಕೂರಿನಲ್ಲಿ ಹಾಕಿಸಿರುವ ಶಾಸನವೂ ಇದೇ ಪಾಠವನ್ನು ಹೊಂದಿದೆ.[16]

ಕ್ರಿ.ಶ.1311ರಲ್ಲಿ ಮಲ್ಲಿಕಾಫರನ ದಾಳಿ ಮತ್ತು ಕ್ರಿ.ಶ.1327ರ ಮಹಮದ್ ಬಿನ್ ತೊಘಲಕ್‌ನ ದಾಳಿಗಳ ನಂತರ 3ನೇ ಬಲ್ಲಾಳನು ತನ್ನ ರಾಜಧಾನಿಯನ್ನು ಅನ್ನಾಮಲೆ(ಉನ್ನಮಲೆ) ಪಟ್ಟಣಕ್ಕೆ ಬದಲಾಯಿಸಿದ. ಕ್ರಿ.ಶ.1327ರ ನಂತರ ಶಾಸನಗಳಲ್ಲಿ ಉನ್ನಮಲೈ ಪಟ್ಟಣದಿಂದ ಆಳ್ವಿಕೆ ನಡೆಸುತ್ತಿದ್ದ ದೊರೆ 3ನೇ ಬಲ್ಲಾಳದೇವ ಎಂಬ ಉಲ್ಲೇಖವನ್ನು ಕಾಣುತ್ತೇವೆ. ಕ್ರಿ.ಶ.1328ರ ಹಾಡೋನಹಳ್ಳಿ ಶಾಸನದಲ್ಲಿ ಬಲ್ಲಾಳನು ಉನ್ನಮಲೆ ಪಟ್ಟಣದಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಮಹಾಮಂತ್ರಿ ಪುನ್ನವನ ಮಗ ಮೇಯ–ದಂಡನಾಯಕನು ಯಲಹಂಕನಾಡಿನ ಮಲದಿಪನಪುರದ ಚೆನಗನಿಗೆ ಹಾಡುವನಹಳ್ಳಿಯನ್ನು ದಾನ ನೀಡಿದ್ದಾನೆ.[17] ಇದೇ ವರ್ಷದ ಕುರುವಿಗೆರೆ ಶಾಸನದಲ್ಲಿ ಇದೇ ಮಹಾಮಂತ್ರಿ ಪೊನ್ನವನ ಮತ್ತೊಬ್ಬ ಮಗ ಕಾಮದಂಡನಾಯಕನು ಕುರುವಗೆರೆಯನ್ನು ದಾನ ನೀಡಿದ್ದಾನೆ.[18]

ಕ್ರಿ.ಶ.1328ರ ಶಾಸನದಲ್ಲಿ ಹೊಯ್ಸಣ ಯಲಾಲಪರಸನು ಪುನ್ನಾಡ–70 ಅನ್ನು ಶಾಂತಿ ಮತ್ತು ಬುದ್ಧಿವಂತಿಕೆಯಿಂದ ಆಳುತ್ತಿದ್ದಾಗ ಅವನ ಮಂತ್ರಿ ಯನಪಯನು ವರಹದೇಶ್ವರನಿಗೆ ದಾನ ನೀಡಿದ್ದಾನೆ.[19] ಈ ಪುನ್ನಾಡ–70 ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರದ ಎಪ್ಪತ್ತು ಗ್ರಾಮಗಳಿಂದಾದ ಸ್ಥಳೀಯ ಆಡಳಿತ ಘಟಕವಾಗಿತ್ತು. ಕ್ರಿ.ಶ.1338ರ

[13] ಅಡಿಟಿಪ್ಪಣಿ–14, Db–31, AD-1207
[14] ಮೇಲಿನದೇ, Db–31, AD-1207
[15] ಮೇಲಿನದೇ, Db–52, AD-1306
[16] ಮೇಲಿನದೇ,, Db–60, AD-1306
[17] ಮೇಲಿನದೇ, Db–14, AD-1328
[18] ಅಡಿಟಿಪ್ಪಣಿ–20, Db–18, AD-1328
[19] ಮೇಲಿನದೇ, Db–38, AD-1328

ಗೌಡಹಳ್ಳಿ ಶಾಸನ[20] ಮತ್ತು ಕ್ರಿ.ಶ.1340ರ ಶಾಕಲದೇವನಪುರದ ಶಾಸನಗಳು[21] ತ್ರುಟಿತವಾಗಿದ್ದು ದೊರೆ ವೀರಬಲ್ಲಾಳನ ಹೆಸರು ಮತ್ತು ವರ್ಷ ಮಾತ್ರ ಕಾಣುತ್ತದೆ.

ಈ ಹೊಯ್ಸಳ ಶಾಸನದ ನಂತರ ವಿಜಯನಗರ ಅರಸರ ಶಾಸನಗಳು ಈ ತಾಲೂಕಿನಲ್ಲಿ ದೊರೆಯುತ್ತವೆ. ಕ್ರಿ.ಶ.1342ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು. ಕ್ರಿ.ಶ.1346ರ ನಂತರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಿಜಯನಗರ ಅರಸರ ಹೆಸರಿನಲ್ಲಿ ಶಾಸನಗಳನ್ನು ಹಾಕಿಸಲಾಗಿದೆ.

ಕ್ರಿ.ಶ.1367ರ ಅರಳುಮಲ್ಲಿಗೆ ಶಾಸನವು ಬುಕ್ಕರಾಯನ ಹೆಸರಿನಲ್ಲಿದೆ. ಈ ಶಾಸನದಲ್ಲಿ ಹುಲುಕಡಿ ನಾಡಪ್ರಭು ಬುಮ್ಮರಳ ಕೋಟ–ಗೌಡನ ಹೆಸರಿದ್ದು ಶಾಸನ ತ್ರುಟಿತವಾಗಿದೆ.[22] ಬುಕ್ಕರಾಯನ ಈ ಶಾಸನ ಮಾತ್ರ ಈ ತಾಲೂಕಿನಲ್ಲಿ ದೊರೆತಿದೆ.

ಕ್ರಿ.ಶ.1416ರ ಹಾಡೋನಹಳ್ಳಿಯ ಶಾಸನ ರಾಜ ಪರಮೇಶ್ವರ ಅಶ್ವಪತಿ(ಅಶ್ವಪಡೆ) ಗಜಪತಿ(ಗಜಪಡೆ) ನರಪತಿ(ಕಾಲ್ದಳಗಳ) ರಾಜನಾದ ಹರಿಹರರಾಯನ ಮಗ..........ರಾಯ ಒಡೆಯರ–ತ್ರಿಭುವನ–ಚಕ್ರವರ್ತಿಯ ಹಿರಿಯ ಮಗ ಓಬನು ಬೆಟ್ಟದ ಬಳಿಯ ಮಸೀದಿಯ ಬಳಿ ತಿರುಮಲೆ ದೀಪ ಕಂಭವನ್ನು ಮಾಡಿಸಿದನು ಎಂದು ತಿಳಿಸುತ್ತದೆ.[23] ಕ್ರಿ.ಶ.1416ರ ಹೊತ್ತಿಗಾಗಲೇ ಇಲ್ಲಿ ಮಸೀದಿ ನಿರ್ಮಾಣವಾಗಿದ್ದ ವಿಚಾರ ಮತ್ತು ಇಸ್ಲಾಂ ಧರ್ಮದ ಪ್ರಚಾರವನ್ನು ಈ ಶಾಸನ ತಿಳಿಸುತ್ತದೆ. ಚನ್ನಕೇಶವ ದೇವಾಲಯಕ್ಕೆ ಹಾಕಿಸಿರುವ ಈ ದೀಪ ಕಂಭವನ್ನು ಇಂದು ಹನುಮಂತ ಗರುಡ ಗಂಭ ಎಂದು ಕರೆಯುತ್ತಾರೆ.

ಕ್ರಿ.ಶ.1418ರ ಎರಡು ವೀರಗಲ್ಲುಗಳು ಮಧುರೆ ಗ್ರಾಮದಲ್ಲಿ ದೊರೆತಿದೆ. ಯುದ್ಧದಲ್ಲಿ ಮಡಿದ ವೀರರ ನೆನಪಿನಲ್ಲಿ ಶಾಸನಗಳನ್ನು ಹಾಕಿಸಲಾಗಿದೆ. ಒಂದು ವೀರಗಲ್ಲು ತಿಳಿಸುವಂತೆ ಮಧುರೆ ಯಲ್ಲಾಲ–ಹೆಗ್ಗಡೆ–ಗೌಂಡನ ಮಗ ಸಮಯದ ಕುಮಾರನು ಕಾರೆಬೊಮ್ಮನ ಜೊತೆ ಯುದ್ಧ ಮಾಡಿ ಮಡಿದನು.[24] ಮತ್ತೊಂದು ವೀರಗಲ್ಲೂ ಸಹ ಈ ಯುದ್ಧಕ್ಕೆ ಸಂಬಂಧಿಸಿದ್ದು, ಓಬ್ಬನದ–ಗೌಂಡ ಮಗ ತನ್ನ ಭಾಷೆಯಂತೆ......(ಮುಂದಿನ ಭಾಗ ತ್ರುಟಿತವಾಗಿದೆ.) ಈ ವೀರಗಲ್ಲು ನಾಶವಾಗಿದ್ದು ಮಾಹಿತಿ ಅಪೂರ್ಣವಾಗಿದೆ.[25]

ಕ್ರಿ.ಶ.1464ರ ಕನಸವಾಡಿ ಧರ್ಮ ಶಾಸನದಲ್ಲಿ ಸರ್ವನಾಯಕನು ಶಿವಗಂಗೆಯ ಗಂಗಾಧರನಿಗೆ ನೈವೇದ್ಯ ವ್ಯವಸ್ಥೆ ಮಾಡಿಸಿದ್ದು ಕನಸವಾಡಿಯನ್ನು ಕಕುದ್ಗಿರಿಗೆ ದಾನ ನೀಡಿದ್ದಾನೆ.[26] ಕನಸವಾಡಿಯು ನೆಲವಂಗಲ ಸೀಮೆಗೆ ಸೇರಿದ್ದು ನೆಲವಂಗಲ ಸೀಮೆಯ ನಾಯಕತನವು ಸರ್ವನಾಯಕನಿಗೆ ಸೇರಿತ್ತು. ನೆಲಮಂಗಲದ ಕುಕ್ಕಲನಾಡಪ್ರಭುಗಳ ನಂತರ ಸರ್ವನಾಯಕನಿಗೆ ನೆಲವಂಗಲ ಸೀಮೆ ನಾಯಕತನ ದೊರೆತಂತಿದೆ.

ಕ್ರಿ.ಶ.1493ರ ಪುಟ್ಟೇನಹಳ್ಳಿ ಅಗ್ರಹಾರದ ಶಾಸನವು ತಿಳಿಸುವಂತೆ ಸಾಳುವ ಇಮ್ಮಡಿರಾಯನ ಮಗ ಸಾಳುವ ದೇವಪ್ಪ ನಾಯಕನು ತಿಪ್ಪೂರು ಸೀಮೆಯನ್ನು ಆಳುತ್ತಿದ್ದನು. ಆಗ ಹುಲುಕುಡಿ ನಾಡಪ್ರಭು ಭಯನ–ಗೌಂಡನ ಮಗ ಭಯಪ್ಪ–ಗೌಂಡನು ಭಯಿರಾಪುರವನ್ನು ಅಗ್ರಹಾರವಾಗಿ ಮಾಡಿ ಸಿಂಗಪ್ಪಯ್ಯನ ಮಗ ತಿಪ್ಪರಸಯ್ಯನಿಗೆ ದಾನ ನೀಡಿದ್ದಾನೆ.[27] ಇಮ್ಮಡಿರಾಯನ ಮಗ ಎಂದರೆ ತೊತ್ತಿನ ಮಗ, ಸೇವಕ ಎಂದು ಅರ್ಥೈಸಬೇಕು.

[20] ಮೇಲಿನದೇ, Db–61, AD-1338
[21] ಮೇಲಿನದೇ, Db–43, AD-1340
[22] ಮೇಲಿನದೇ, Db–39, AD-1367
[23] ಮೇಲಿನದೇ, Db–16, AD-1416
[24] ಅಡಿಟಿಪ್ಪಣಿ–25, Db–55, AD-1418
[25] ಮೇಲಿನದೇ, Db–56, AD-1418
[26] ಮೇಲಿನದೇ, Db–51, AD-1464
[27] ಮೇಲಿನದೇ, Db–42, AD-1493

ಕ್ರಿ.ಶ.1367ರ 3ನೇ ಬಲ್ಲಾಳನ ಶಾಸನದಲ್ಲಿ ಹುಲುಕಡಿ ನಾಡಪ್ರಭು ಬುಮ್ಮಾರಳ ಕೋಟಗೌಡ ಪ್ರಸ್ತಾಪವಿದೆ. ಈತನ ವಂಶಸ್ಥರೇ ಕ್ರಿ.ಶ.1493ರ ಶಾಸನದ ಭಯನಗೌಡ ಇರಬಹುದು. ತಿಪ್ಪರಸನಿಗೆ ನೀಡಿರುವ ಅಗ್ರಹಾರ ಇಂದಿನ ಪುಟ್ಟಯ್ಯನ ಅಗ್ರಹಾರವೆಂದು ತೋರುತ್ತದೆ. ಇದೇ ಪಾಠವಿರುವ ಮತ್ತೊಂದು ಶಾಸನ ಇದೇ ಗ್ರಾಮದಲ್ಲಿ ದೊರೆತಿದೆ.[28]

ಕಂಚಿಗನಾಳು ಗ್ರಾಮವು ಕೃಷ್ಣದೇವರಾಯನ ಕಾಲದಲ್ಲಿ ಸಿಂಗಸಮುದ್ರ ಎಂಬ ಅಗ್ರಹಾರವಾಗಿತ್ತು. ಕ್ರಿ.ಶ.1519ರ ಕಂಚಿಗನಾಳ ಶಾಸನವು ಕೃಷ್ಣದೇವರಾಯನ ಕಾಲದ್ದಾಗಿದ್ದು ರಾಮಭಟ್ಟ ಪುರಾಣಿಕ ಮತ್ತು........... ಪಂಡಿತರಿಗೆ ಕಂಚಿಗನಹಾಳು ಗ್ರಾಮವನ್ನು ದಾನವಾಗಿ ನೀಡಲಾಗಿದ್ದು ಕಂಚಿಗನಾಹಾಳು ಗ್ರಾಮಕ್ಕೆ ಸಿಂಗಸಮುದ್ರ ಅಗ್ರಹಾರ ಎಂದು ಹೆಸರಿಡಲಾಗಿದೆ[29] ಎಂದು ಶಾಸನ ತಿಳಿಸುತ್ತದೆ. ಕ್ರಿ.ಶ.1527ರ ಹಾಡೋನಹಳ್ಳಿಯ ಚನ್ನಕೇಶವ ದೇವಾಲಯದಲ್ಲಿನ ಮತ್ತೊಂದು ಶಾಸನವು ತ್ರುಟಿತವಾಗಿದ್ದು, ಕೃಷ್ಣದೇವರಾಯ ಮಹಾರಾಜನು ದೇವಾಲಯದಲ್ಲಿ ಏನ್ನನ್ನೋ ಕಟ್ಟಿಸಿದಂತೆ ಕಾಣುತ್ತದೆ.[30]

ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದ ಅಚ್ಯುತರಾಯನ ಕಾಲದ ತಾಮ್ರಶಾಸನವು ಕೊಣಗಟ್ಟು ಲಕ್ಷ್ಮೀಶಾಸ್ತ್ರಿಗಳ ಬಳಿ ದೊರೆತಿದೆ.[31] ಬಹುಶಃ ಇದು ಅವರ ವಂಶಸ್ಥರಿಗೆ ನೀಡಲಾದ ತಾಮ್ರಶಾಸನವಾಗಿದೆ. ಶಾಸನವು ತುಳುವ ವಂಶಸ್ಥರಾದ ವೀರನರಸಿಂಗರಾಯ ಮತ್ತು ಕೃಷ್ಣದೇವರಾಯನ ಹಲವಾರು ಯುದ್ಧಗಳ ಮಾಹಿತಿ ನೀಡುತ್ತದೆ. ತುಂಗಭದ್ರಾ ನದಿ ದಂಡೆಯ ವಿಠಲೇಶ್ವರ ದೇವನ ಉಪಸ್ಥಿತಿಯಲ್ಲಿ ರಾಮಭಟ್ಟನ ಮಗ ವೆಂಕಟೇಶ್ವರ–ಯಜವನಿಗೆ ಮೊರಸುನಾಡಿನ ಹೊಸಕೋಟೆ ಸೀಮೆಯ ಸಂಬಾಪುರವನ್ನು ಅಗ್ರಹಾರವಾಗಿ ದಾನ ನೀಡಲಾಗಿದೆ.[32] ಇದಕ್ಕೆ ಅಚ್ಯುತ ಮಹಾರಾಯಂಬುದಿ ಎಂದು ಹೆಸರಿಡಲಾಗಿದೆ. ಈ ಶಾಸನವನ್ನು ಮಲ್ಲಣ್ಣನ ಮಗ ಕಮ್ಮಾರ ವಿಚಾನಚಾರ್ಯನು ಬರೆದಿದ್ದಾರೆ. ನರಸಿಂಗ ದೇವರಸನು ಅಚ್ಯುತರಾಯನ ಕಾಲದ ಮಹಾಮಂಡಲೇಶ್ವರನಾಗಿದ್ದನು. ಮಹಾರಾಜ ಅಚ್ಯುತರಾಯನ ಹೆಸರನ್ನು ಅಗ್ರಹಾರಕ್ಕೆ ಇಡಲಾಗಿದೆ.

ಕ್ರಿ.ಶ.1531ರ ಕಾಡನೂರು ಶಾಸನವು ಅಚ್ಯುತರಾಯನ ಕಾಲದ್ದಾಗಿದ್ದು ಹುಲುಕುಡಿ ನಾಡಿನ ನಾಯಕತನವನ್ನು ಪಡೆದಿದ್ದ ಗಂಡ್ರಗೋಳಿಪುರದ ದಳವಾಯಿ ಸೊಣ್ಣಪ್ಪ–ನಾಯಕನ ಮಗ ನಾಗಪ್ಪ–ನಾಯಕನು ಕಾಡನೂರು ಚನ್ನಕೇಶವ ದೇವನಿಗೆ ಪುರ ಧರ್ಮಶಾಸನವನ್ನು ಬರೆದುಕೊಟ್ಟಿದ್ದಾನೆ.[33] ತಮ್ಮ ನಾಯಕನಕ್ಕೆ ಸಲ್ಲುವ ಹುಲುಕಡಿನಾಡಿನ ಹಣಬೆಸೀಮೆಯ ಕಾಡನೂರು ಗ್ರಾಮವನ್ನು ಎಲ್ಲಾ ತೆರಿಗೆಗಳಿಂದ ಮುಕ್ತಗೊಳಿಸಿ, ಅಚ್ಯುತರಾಯ ಮಹಾರಾಯನಿಗೆ ಪುಣ್ಯವಾಗಲೆಂದು, ತುಂಗಭದ್ರಾ ನದಿ ದಡದ ವಿರೂಪಾಕ್ಷನಿಗೆ ಸಾಕ್ಷಿಯಾಗಿ ದಾನ ನೀಡಲಾಗಿದೆ. ಕ್ರಿ.ಶ.1367ರ ಅರಳುಮಲ್ಲಿಗೆ ಶಾಸನ ಮತ್ತು ಕ್ರಿ.ಶ.1493ರ ಪುಟ್ಟಯ್ಯನ ಅಗ್ರಹಾರದ ಶಾಸನಗಳಲ್ಲಿ ಉಲ್ಲೇಖವಾಗಿರುವ ಹುಲುಕಡಿ ನಾಡಪ್ರಭುಗಳ ಅಳ್ವಿಕೆಯು ಕೊನೆಗೊಂಡಿದ್ದು ಹುಲುಕಡಿ ನಾಡಿನ ನಾಯಕತನವು ಗಂಡ್ರಗೋಳಿಪುರದ ದಳವಾಯಿಗೆ ದೊರೆತಿದೆ.

ಕ್ರಿ.ಶ.1535ರಲ್ಲಿ ಮಹಾಮಂಡಲೇಶ್ವರ ಅಚ್ಯುತರಾಯನ ಆಳ್ವಿಕೆಯಲ್ಲಿ ಅಗ್ರಹಾರವೊಂದನ್ನು ಸ್ಥಾಪಿಸಿ ಹಾಕಿಸಿರುವ ಶಾಸನ ಅಳಿಸಿಹೋಗಿದೆ[34]. ಕ್ರಿ.ಶ.1529ರಲ್ಲಿಯೇ ಅಚ್ಯುತರಾಯ ವಿಜಯನಗರ

[28] ಮೇಲಿನದೇ, Db–45, AD-1493
[29] ಅಡಿಟಿಪ್ಪಣಿ–30,Db–19, AD-1519
[30] ಮೇಲಿನದೇ, Db–15, AD-1527
[31] ಮೇಲಿನದೇ, Db–30, AD-1530
[32] ಮೇಲಿನದೇ, Db–30, AD-1530
[33] ಮೇಲಿನದೇ, Db–50, AD-1531
[34] ಅಡಿಟಿಪ್ಪಣಿ–35, Db–02, AD-1535

ಸಿಂಹಾಸನವನ್ನು ಏರಿದರೂ ಕ್ರಿ.ಶ.1535ರ ಈ ಶಾಸನದಲ್ಲಿ ಅಚ್ಯುತರಾಯನನ್ನು ಮಹಾಮಂಡಲೇಶ್ವರ ಎಂದೇ ಕರೆಯಲಾಗಿದೆ.

ಕ್ರಿ.ಶ.1541ರ ಗಂಡ್ರಗೋಳಿಪುರ ಶಾಸನವು ಶಿವಗಂಗೆಯ ಮಲೆಯಕಾಂತ ದೇವನಿಗೆ–ನೀಡಿದ ಧರ್ಮ ಶಾಸನವಾಗಿದೆ.[35] ಗಂಡ್ರಗೋಳಿಪುರದ ದಳವಾಯಿ ಸೊಣ್ಣಪ್ಪ ನಾಯಕನ ಮಗ ಬೈರಪ್ಪ ನಾಯಕನು ಈ ಶಾಸನ ಹಾಕಿಸಿದ್ದಾನೆ. ಕ್ರಿ.ಶ.1531ರ ಕಾಡನೂರು ಶಾಸನವನ್ನು ಇದೇ ದಳವಾಯಿಯ ಮತ್ತೊಬ್ಬ ಮಗ ನಾಗಪ್ಪ–ನಾಯಕನು ಹಾಕಿಸಿದ್ದಾನೆ. ಸೊಣ್ಣಪ್ಪ–ನಾಯಕನಿಗೆ ವೀರನರಸಿಂಹ ದೇವನು ಹುಲುಕಡಿನಾಡನ್ನು ಆಳುತ್ತಿದ್ದಾಗ ಹುಲುಕಡಿನಾಡಿನ ನಾಯಕತನವನ್ನು ದಯಪಾಲಿಸಿದ್ದಾನೆ. ಕ್ರಿ.ಶ.1503–1509ರವರೆಗೆ ವೀರನರಸಿಂಗ ದೇವನು ಆಳ್ವಿಕೆ ನಡೆಸಿದ ಈ ಅವಧಿಯಲ್ಲಿ ಹುಲುಕಡಿ ನಾಡಪ್ರಭುಗಳ ಆಳ್ವಿಕೆ ಕೊನೆಗೊಂಡು, ಹುಲುಕಡಿಯ ನಾಯಕತನ ಗಂಡ್ರಗೋಳಿಪುರದ ದಳವಾಯಿ ಸೊಣ್ಣಪ್ಪ–ನಾಯಕನಿಗೆ ಪ್ರಾಪ್ತವಾಗಿದೆ. ಕ್ರಿ.ಶ.1569ರ ಇದೇ ಊರಿನ ಕ್ರಿ.ಶ.1540ರ ಶಾಸನವೂ ಸಹ ಇದೇ ಪಾಠಯನ್ನು ಹೊಂದಿದೆ.[36] ಸೊಣ್ಣಪ್ಪನಾಯಕನು ಸುಮಾರು 60–65 ವರ್ಷಗಳ ಕಾಲ ಹುಲುಕಡಿನಾಡಿನ ನಾಯಕತನವನ್ನು ಅನುಭವಿಸಿದ್ದಾನೆ.

ಆವತಿ ನಾಡಪ್ರಭುಗಳು 16ನೇ ಶತಮಾನದ ಕೊನೆಯ ಘಟ್ಟದಲ್ಲಿ ಅಂದರೆ ಕ್ರಿ.ಶ.1586ರ ನಂತರ ಅಧಿಕಾರಕ್ಕೆ ಬಂದರೆಂದು ಬಿ.ಎಲ್.ರೈಸ್‌ರವರು ಅಭಿಪ್ರಾಯಪಟ್ಟಿದ್ದರೂ ಕ್ರಿ.ಶ.1518ರ ದೇವನಹಳ್ಳಿ ತಾಲೂಕಿನ ಕಾಡಿಗನಹಳ್ಳಿ ಶಾಸನದಲ್ಲಿ ಅಹುತಿ ನಾಡಪ್ರಭು ಎಂಬ ಪ್ರಸ್ತಾಪವಿದೆ.[37] ಶಾಸನದಲ್ಲಿನ ಈ ಅಹುತಿಯೇ ಅವತಿ ಇರಬಹುದು. ಹೀಗಾದಲ್ಲಿ ಕ್ರಿ.ಶ.1518ರಲ್ಲಿಯೇ ಆವತಿ ನಾಡಪ್ರಭುಗಳು ಅಧಿಕಾರ ನಡೆಸಿದ್ದರೆಂದಾಗುತ್ತದೆ. ಆವತಿ ನಾಡಪ್ರಭುಗಳು ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿಗಳ ಸ್ಥಾಪಕರಾಗಿದ್ದು, ಇವರ ಆಳ್ವಿಕೆ ಈ ಎರಡೂ ತಾಲೂಕುಗಳಿಗೆ ಸೀಮಿತವಾಗಿತ್ತು.

ಕ್ರಿ.ಶ.1586ರ ತಿಪ್ಪೂರು ಗ್ರಾಮದ ಅವತಿ ನಾಡಪ್ರಭುಗಳ ಶಾಸನ ತಿಳಿಸುವಂತೆ ಹಾವಲಿ ಬಯಪ್ಪ–ಗೌಡನ ಕಾಲದಲ್ಲಿ ನಮಃಶಿವಾಯ–ಕೆಂಪಿ–ಸೆಟ್ಟಿಯು ಕಟ್ಟಿಸಿದ ಕಲ್ಲಿನ ಮಠಕ್ಕೆ ಮೂಲೆಗೋಸು ಅಂದರೆ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ನಾಲ್ಕು ದಿಕ್ಕುಗಳಿಂದಲೂ ಬಂದ ಸಾಮಾಗ್ರಿಗಳು ಹಣಬೆ ಮತ್ತು ತಿಪ್ಪೂರುಗಳನ್ನು ದಾಟಿದರೆ ಒಂದು ಮೂಲೆಗೋಸನ್ನು ಕಲ್ಲಿನ ಮಠಕ್ಕೆ ನೀಡುವುದು.[38] ಇದೇ ಗ್ರಾಮದ ಬಸವನ ದೇವಾಲಯದ ಬಳಿಯ ಶಾಸನದಲ್ಲಿಯೂ ಇದೇ ಪಾಠವಿದೆ.[39] ಕ್ರಿ.ಶ.1596ರ ಅಂತ್ರಹಳ್ಳಿಯ ಶಾಸನವು ಹಾವಲಿ ಬಯಪ್ಪ–ಗೌಡನ ಮಗ ಇಮ್ಮಡಿ ಬಯಪ್ಪ–ಗೌಡನು ಹಾಕಿಸಿದ್ದು ಅವನ ಸೋದರಿಯ ಮಗ ಪನ್ನೆ ಸೊಣ್ಣಯ್ಯನಿಗೆ ನೀಡಲಾದ ಭೂ ಒಡೆತನದ ಬಗ್ಗೆ ಮಾಹಿತಿ ನೀಡುವ ಕನಚಿ ಶಾಸನ ಹಾಕಿಸಿದ್ದಾನೆ. ಅಂತ್ರಹಳ್ಳಿಯ ಈ ಶಾಸನದಲ್ಲಿ ಅಂತರವಳ್ಳಿಯ ಭೂಮಿಯನ್ನು ಗೌಡಗೊಡುಗೆಯಾಗಿ ನೀಡಲಾಗಿದೆ.[40] ಅಂತ್ರಹಳ್ಳಿ ಗ್ರಾಮವನ್ನು ಶಾಸನದಲ್ಲಿ ಅಂತರವಳಿ ಗ್ರಾಮ ಎಂದು ಕರೆಯಲಾಗಿದೆ.[41]

ಕ್ರಿ.ಶ.1610ರ ನಾಗೇನಹಳ್ಳಿ ಶಾಸನವನ್ನು ವಿಜಯನಗರ ಅರಸರ ಹೆಸರಿನಲ್ಲಿ ಹಾಕಿಸಿದ್ದು ತಿರುವೆಂಕಟಪತಿ–ದೇವ–ಮಹಾರಾಯನ ಆಳ್ವಿಕೆಯಲ್ಲಿ ಅವತಿ ನಾಡಪ್ರಭು – – – ಭಯರೇ ಗೌಡ–ಅಯ್ಯನ ಮೊಮ್ಮಗ ಹಾವಲಿ ಬಯಿರೇ–ಗೌಡರ–ಅಯ್ಯನ ಮಗ ಇಮ್ಮಡಿ ಹಾವಾಳಿ ಬೈಯಿರಪ್ಪ–

[35] ಮೇಲಿನದೇ, Db–40, AD-1541

[36] ಮೇಲಿನದೇ, 43, Db–41, AD-1569

[37] ಮೇಲಿನದೇ, Dv–55, AD-1518

[38] ಅಡಿಟಿಪ್ಪಣಿ–39, Db–5, AD-1586

[39] ಮೇಲಿನದೇ, Db–6, AD-1586

[40] ಮೇಲಿನದೇ, Db–7, AD-1596

[41] ಮೇಲಿನದೀ, Db-7, AD-1596

ಗೌಡನು ಪುಟ್ಟಣ್ಣ ಪಂಡಿತನಿಗೆ ಹಣಬೆ ಸೀಮೆಯ ಕೆಲ ಊರನ್ನು ದಾನ ನೀಡಿದ್ದು ಅದಕ್ಕೆ ಇಮ್ಮಡಿ ಬೈಯಿರಾಪುರ ಎಂದು ಹೆಸರಿಟ್ಟಿದ್ದಾನೆ.[42] ಹಣಬೆ ಸೀಮೆಯ ಹಳ್ಳಿಯ ಹೆಸರುಗಳು ತ್ರುಟಿತವಾಗಿದೆ. ಬೈಯಿರಾಪುರ ಊರು ಇಂದಿಗೂ ಅದೇ ಹೆಸರಿನಿಂದ ಕರೆಯಲ್ಪಡುತ್ತಿದೆ. ಸೂರ್ಯಗ್ರಹಣದ ಸಂದರ್ಭದಲ್ಲಿ ತನ್ನ ತಂದೆ ಪುಣ್ಯವಾಗಲೆಂದು ತಿರುಮಲ ಪಂಡಿತನಿಗೆ ಇಮ್ಮಡಿ ಬೈಯಿರಪ್ಪಗೌಡನು ಅಗ್ರಹಾರವಾಗಿ ಹಳ್ಳಿಯೊಂದನ್ನು ದಾನ ನೀಡಿದ್ದಾನೆ.[43]

ಕ್ರಿ.ಶ.1687ರಲ್ಲಿ ಮೈಸೂರು ಒಡೆಯರ ಸಹಕಾರದೊಂದಿಗೆ ಬೆಂಗಳೂರಿನ ಮೇಲೆ ದಾಳಿ ಮಾಡಿದ ಮೊಘಲ್ ಸೇನೆಯು ಬೆಂಗಳೂರನ್ನು ಚಿಕ್ಕ ದೇವರಾಜ ಒಡೆಯರಿಗೆ ಮಾರಿದಾಗ ದೊಡ್ಡಬಳ್ಳಾಪುರವು ಸಿರಾ ಸುಭಾಕ್ಕೆ ಸೇರಿ ಮೊಘಲ್ ಸೇನಾನಿ ಖಾಸಿಂಖಾನನ ಆಳ್ವಿಕೆಗೆ ಒಳಪಟ್ಟಿತು.

ಕ್ರಿ.ಶ.1691ರ ಔರಂಗಜೇಬನ ಶಾಸನವು ದೊಡ್ಡಬಳ್ಳಾಪುರ ಕೋಟೆಯಲ್ಲಿದ್ದು[44] ಈ ಶಾಸನವನ್ನು ಕ್ರಿ.ಶ.1267ರ ವೀರನರಸಿಂಹನ ಶಾಸನದ ಮೇಲ್ಭಾಗದಲ್ಲಿ ಹಾಕಿಸಲಾಗಿದೆ. ಈ ಶಾಸನದಲ್ಲಿ ತಿಳಿಸಿರುವಂತೆ ಔರಂಗಜೇಬನ 30ನೇ ವರ್ಷದ ಆಳ್ವಿಕೆಯಲ್ಲಿ ಅಂದರೆ ಕ್ರಿ.ಶ.1688ರಲ್ಲಿ ಈ ಶಾಸನದ ಕಲ್ಲನ್ನು ಕೋಟೆಯ ಈಶಾನ್ಯಕ್ಕೆ ಎರಡು ಕಿಯೋಸ್ ದೂರದಲ್ಲಿರುವ ಫ್ರಾಯಾದ ದೇವಾಲಯದಿಂದ ತರಲಾಗಿದ್ದು ಕಟ್ಟಡಕ್ಕೆ ಬಳಸಿಕೊಳ್ಳುವ ಉದ್ದೇಶವಿತ್ತು. ಆದರೆ ಇದು ದಾನದ ಮಾಹಿತಿ ಹೊಂದಿರುವುದರಿಂದ ಈ ಕಲ್ಲನ್ನು ಕೋಟೆ ನಿರ್ಮಾಣಕ್ಕೆ ಬಳಸಿಕೊಳ್ಳದೆ ಶಾಸನ ಹಾಕಿಸಿದವನ ನೆನಪಿಗಾಗಿ ಇಲ್ಲೇ ನೆಡಲಾಗಿದೆ. ಔರಂಗಜೇಬನ ಆಳ್ವಿಕೆಯ 32ನೇ ವರ್ಷದಲ್ಲಿ ಬಳ್ಳಾಪುರ ಕೋಟೆಯು ಸಾಂಬಾ ಕುಟುಂಬದ ಆಳ್ವಿಕೆಗೆ ಒಳಪಟ್ಟಿತ್ತು. ಸಾಂಬದೂದ್‌ನ ನಂತರ ಅವನ ಮಗ ಸಿವದೂದ್ ಮರಾಠನಿಗೆ ಈ ಕೋಟೆಯ ಉಸ್ತುವಾರಿ ದೊರೆತ್ತಿತ್ತು. ಕರ್ನಾಟಕದ ಫೌಜುದಾರನಾಗಿದ್ದ ಖಾಸಿಂಖಾನನ ಪರಿಶ್ರಮದಿಂದ ಈ ಕೋಟೆ ಮೊಘಲರ ಅಧೀನಕ್ಕೆ ಒಳಪಟ್ಟಿತು. ತನ್ನ 34ನೇ ಆಳ್ವಿಕೆಯ ವರ್ಷದಲ್ಲಿ ಈ ಕೋಟೆಯನ್ನು ಔರಂಗಜೇಬನ ನಿಷ್ಠಾವಂತ ಸೇವಕನಾದ ಷೇಕ್ ಅಬ್ದುಲಾನಿಗೆ ನೀಡಿದನು. ಈತನು ಫರೂಕ್ ಎಂದೂ ಪ್ರಸಿದ್ಧನಾಗಿದ್ದ. ಈತ ಷೇಕ್–ಫರುದ್ದೀನ್–ಮಸಾದ ಚಿಸ್ತಿ–ಅಲಿಜರಮಿಯ ಶಿಷ್ಯನಾಗಿದ್ದನು. ಷೇಕ್ ಅಬ್ದುಲಾನ ಅಣತಿಯ ಮೇರೆಗೆ ಅವನ ಸೇವಕ ಷೇಕ್ ಮಹಮದ್ ಹಫಿಜ್ ಈ ಶಾಸನ ಬರೆದಿದ್ದಾನೆ.[45]

ಮಲ್ಲನಪಾಳ್ಯದ ಕ್ರಿ.ಶ.1669ರ ತಾಮ್ರಶಾಸನ ವಿಶಿಷ್ಟವಾಗಿದೆ. ರಾಜಾಧಿರಾಜರುಗಳಾದ ಕಾಂತಿರಾಜು, ಕಾಂತೇಯ–ರಾಜು, ಮಂತ್ರೇಯ–ರಾಜು ಮತ್ತು ಕರಾಚೂರಿ–ನಾಂಗೈಯ್ಯ ರಾಜು ಮತ್ತು ಏಳು ಜನ ಸ್ವಾಮಿಗಳು ಹಾಕಿಸಿರುವ ಶಾಸನ ಇದಾಗಿದೆ.[46] ಮಾಗಡಿಯ ರಂಗನಾಥಸ್ವಾಮಿ ದೇವಾಲಯ ಆನೆಗೆ ಯಾರೋ ಮಾಟ ಮಂತ್ರ ಪ್ರಯೋಗವನ್ನು ಮಾಡಿ ಆನೆಗೆ ಹುಳ ಬಿದ್ದು ಹುಳಗಳು ಆನೆಯನ್ನು ತಿನ್ನಲಾರಂಭಿಸಿ ಆನೆ ಸಾಯುವ ಸ್ಥಿತಿಯಲ್ಲಿತ್ತು. ಆನೆಯ ಆರೋಗ್ಯವನ್ನು ಯಾರು ಸುಸ್ಥಿತಿಗೆ ತರುತ್ತಾರೋ ಅವರಿಗೆ ಸಾಮ್ರಾಜ್ಯದಾದ್ಯಂತ ಉಡುಗೊರೆಗಳನ್ನು ನೀಡಲಾಗುವುದು ಎಂದು ಡಂಗೂರ ಹೊಡೆಸಲಾಯಿತು. ಪುಲಿ–ಭೈರವ ಎಂಬಾತನು ಆನೆಯನ್ನು ಮಾಟಮಂತ್ರದಿಂದ ದೂರಗೊಳಿಸಿ ಅದರ ಆರೋಗ್ಯ ಸುಧಾರಿಸಿದನು. ಅವನ ಕೈಗಳಿಗೆ ಪಚ್ಚೆಯ ಕಡಗ, ಗೌರವದ ಸಂಕೇತವಾದ ಉಡುಗೆ ಮತ್ತು ಸಾವಿರ ವರಹಗಳನ್ನು ಕೊಟ್ಟು ಗೌರವಿಸಲಾಯಿತು. ಇದಲ್ಲದೆ ಇಡೀ

[42] ಮೇಲಿನದೇ, Db–49, AD-1610

[43] ಮೇಲಿನದೇ, Db–49, AD-1610

[44] ಮೇಲಿನದೇ, Db–31, AD-1691

[45] ಅಡಿಟಿಪ್ಪಣಿ–46 Db–31, AD-1691

[46] ಅಡಿಟಿಪ್ಪಣಿ–53, Db–64, AD-1669

ಸಾಮ್ರಾಜ್ಯದಾದ್ಯಂತ ಅವನಿಗೆ ದಾನ ನೀಡಲಾಯಿತು ಎಂದು ಈ ಶಾಸನ ತಿಳಿಸುತ್ತದೆ. ಈ ಶಾಸನವನ್ನು ದೇವ ನಂಜುಂಡೇಶ್ವರನ ಸಾಕ್ಷಿಯಾಗಿ ಬರೆಸಲಾಗಿದೆ.

ಆವತಿ ನಾಡಪ್ರಭುಗಳ ಆಳ್ವಿಕೆ ಕ್ರಿ.ಶ.1716ರವರೆಗೂ ಮುಂದುವರೆದಿದ್ದು ಗೋಪಾಲಗೌಡಯ್ಯನ ಮಗ ದೊಡ್ಡಬೈರಪ್ಪ-ಗೌಂಡಯ್ಯನ ಶಾಸನ ಮಾವಳೀಪುರದಲ್ಲಿ ಲಭ್ಯವಿದೆ.[47] ತನ್ನ ದೇವನಾಪುರ ಸಾಮ್ರಾಜ್ಯದ ದೇವನಹಳ್ಳಿ ರಾಜ್ಯದ ಸೀಗೆಕೋಟೆ ಹೋಬಳಿಯ ಕುರುಬರಹಳ್ಳಿ ಮತ್ತು ಮಾವಳ್ಳಿಪುರಗಳಲ್ಲಿ ದೊಡ್ಡ ಬೈರಸಾಗರ ಎಂಬ ಅಗ್ರಹಾರವನ್ನು ಸ್ಥಾಪಿಸಿ ಎಲ್ಲಾ ತೆರಿಗೆಗಳಿಂದ ಈ ಗ್ರಾಮಗಳನ್ನು ಮುಕ್ತಗೊಳಿಸಿ ಸುಬ್ಬಭಟ್ಟನಿಗೆ ದಾನ ನೀಡಲಾಗಿದೆ. ಕ್ರಿ.ಶ.1518ರಲ್ಲಿ ಕಾಣಿಸಿಕೊಂಡ ಆವತಿ ಪ್ರಭುಗಳು ಕ್ರಿ.ಶ.1716 ರವರೆಗೂ ಮುಂದುವರೆದಿದ್ದಾರೆ.

ತೂಬಗೆರೆ ಕಸಬಾದ ಗೌಡಿಕೆಯು ಬೆಸ್ತ ಲಕ್ಕ-ನಾಯಕ ಸಿಂಗಿ ನಾಯಕನಿಗೆ ಪ್ರಾಪ್ತವಾಗಿದ್ದು, ಅವನು ಜೀವನ ನಡೆಸಲು ಕೆಲ ಭೂಮಿಯನ್ನು ಇನಾಮತಿಯಾಗಿ ನೀಡಲಾಗಿದೆ. ಇದು ಟಿಪ್ಪುವಿನ ಕಾಲದ ಶಾಸನವಾಗಿದೆ. ಬೆಸ್ತ ಲಕ್ಕ-ನಾಯಕ ಸಿಂಗಿ ನಾಯಕನು ಅಹಮದಿ ಸಾಮ್ರಾಜ್ಯ ಮತ್ತು ಅಮೀಲ್‌ನಿಗೆ ನಿಷ್ಠೆಯಿಂದ ಇರುವುದು ಎಂದು ಶಾಸನ ತಿಳಿಸುತ್ತದೆ.[48]

ಕ್ರಿ.ಶ.1638ರಲ್ಲಿ ರಣದುಲ್ಲಾಖಾನನ ಸೇನೆ ಬೆಂಗಳೂರನ್ನು ಮುತ್ತಿ ಬೆಂಗಳೂರಿನ ಚಿತ್ರಣ ಬದಲಾಯಿಸಿತು. ಷಹಾಜಿ ಬೋಂಸ್ಲೆಗೆ ಬೆಂಗಳೂರು ಜಹಗೀರಾಗಿ ದೊರೆತಾಗ ದೊಡ್ಡಬಳ್ಳಾಪುರವು ಇದರ ಭಾಗವಾಗಿತ್ತು. ಷಹಾಜಿಯ ನಂತರ ಅವನ ಮಗ ವೆಂಕೋಜಿ ಮತ್ತು ಶಿವಾಜಿಯರ ನಡುವಿನ ವ್ಯವಹಾರದಲ್ಲಿ ದೊಡ್ಡಬಳ್ಳಾಪುರವನ್ನು ಶಿವಾಜಿಯ ಅತ್ತಿಗೆ, ವೆಂಕೋಜಿಯ ಪತ್ನಿ ದೀಪಾಬಾಯಿಗೆ ಅರಿಶಿಣ ಕುಂಕುಮಕ್ಕೆ ಕೊಡುಗೆಯಾಗಿ ನೀಡಲಾಯಿತು. ದೊಡ್ಡಬಳ್ಳಾಪುರ ಕೋಟೆಯು ಔರಂಗಜೇಬನ ಆಳ್ವಿಕೆಗೂ ಒಳಪಟ್ಟಿದ್ದು, ಅವನ ಸೇವಕ ಖಾಸಿಂ ಖಾನ್ ಇಲ್ಲಿ ಸ್ವಲ್ಪ ಕಾಲ ನೆಲೆಸಿದ್ದನು. ನಂತರ ದೊಡ್ಡಬಳ್ಳಾಪುರವು ಮೈಸೂರು ಸಂಸ್ಥಾನದ ಭಾಗವಾಯಿತು

**ಆಕರ ಗ್ರಂಥಗಳು**


- *ಇತಿಹಾಸ ದರ್ಶನ, ಸಂ-14.* (1999)– ಕರ್ನಾಟಕ ಇತಿಹಾಸ ಅಕಾಡೆಮಿ
- *Annual Report of the Mysore Archeological Department.* Survey of Mysore, MAR, 1902-1942, The Government Press.
- Rice B. Lewis. (1905). *Epigraphia Carnatica-IX and Supplementary.* Mysore Government Central Press.
- Suryanath U Kamath (1989), *Bangalore Rural District Gazetteer.* Government of Karnataka.
- Suryanath U, Kamath. (1989). *Karnataka State Gazetteer.* Government of Karnataka Publication.


[47] ಮೇಲಿನದೇ, Db–63, AD-1716

[48] ಅಡಿಟಿಪ್ಪಣಿ–49, Db–12, AD-1782